## ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 666
2) ಸದಸ್ಯರ ಹೆಸರು : ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
3) ಉತ್ತರಿಸುವ ದಿನಾಂಕ: : 04-03-2021
4) ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ<br>(ರೂ.ಕೋಟಿಗಳಲ್ಲಿ)</th></tr>
<tr><td>ಅ)</td><td>ಜಿಎಸ್‌ಟಿ ತೆರಿಗೆ ವಸೂಲಾತಿಯಲ್ಲಿ ಕೊರತೆ ಆಗಿರುವ ಹಿನ್ನಲೆಯಲ್ಲಿ ಜಿಎಸ್‌ಟಿ ಪರಿಹಾರ ರೂಪದಲ್ಲಿ 2017 ರಿಂದ ಇಲ್ಲಿಯವರೆಗೂ ಕೇಂದ್ರ ಸರ್ಕಾರ ಕರ್ನಾಟಕ ರಾಜ್ಯಕ್ಕೆ ನೀಡಬೇಕಾಗಿರುವ ಪರಿಹಾರವೆಷ್ಟು; (ವರ್ಷವಾರು ನೀಡಬೇಕಾಗಿರುವ ಪರಿಹಾರ, ಬಿಡುಗಡೆ ಮಾಡಿರುವ ಪರಿಹಾರ ಮತ್ತು ಉಳಿಕೆ ಮೊತ್ತದ ವಿವರ ನೀಡುವುದು)</td><td>
<table>
<tr><th>ಆರ್ಥಿಕ ವರ್ಷ</th><th>ರಾಜ್ಯಕ್ಕೆ ನೀಡಬೇಕಾಗಿರುವ ಪರಿಹಾರ ಮೊತ್ತ</th><th>ರಾಜ್ಯಕ್ಕೆ ಬಿಡುಗಡೆ ಮಾಡಿರುವ ಪರಿಹಾರ ಮೊತ್ತ</th><th>ಬಾಕಿ ಮೊತ್ತ</th></tr>
<tr><td>2017-18</td><td>9251.62</td><td>9251.62</td><td>ಇಲ್ಲ</td></tr>
<tr><td>2018-19</td><td>18340.47</td><td>18340.47</td><td>ಇಲ್ಲ</td></tr>
<tr><td>2019-20</td><td>20105.89</td><td>20105.89</td><td>ಇಲ್ಲ</td></tr>
<tr><td>2020-21 (ಜನವರಿ-21ರ ಅಂತ್ಯಕ್ಕೆ)</td><td>27292.38</td><td>15936.43</td><td>11355.95</td></tr>
</table>
</td></tr>
<tr><td>ಆ)</td><td>ವರ್ಷವಾರು ಜಿಎಸ್‌ಟಿ ತೆರಿಗೆ ವಸೂಲಾತಿಯಲ್ಲಿ ರಾಜ್ಯ ಸರ್ಕಾರ ಕೊರತೆ ಅನುಭವಿಸುತ್ತಿರುವ ಮತ್ತು ಇದರಿಂದ ಕೇಂದ್ರ ಸರ್ಕಾರದಿಂದ ಪರಿಹಾರ ರೂಪದಲ್ಲಿ ನೀಡಬೇಕಾಗಿರುವ ಮೊತ್ತ ಏರಿಕೆ ಆಗುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಈ ಕೊರತೆಯನ್ನು ತುಂಬಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)</td><td>ಹೌದು. ಕೇಂದ್ರ ಸರ್ಕಾರವು ಸೆಸ್ ಕಾಯ್ದೆ 2017ರ ಮುಖಾಂತರ ಸಂಗ್ರಹಿಸುತ್ತಿರುವ ಸೆಸ್‌ನಿಂದ ಪ್ರತಿ ವರ್ಷವೂ ತುಂಬಿಕೊಡುತ್ತಿದೆ. 2020-21ನೇ ಸಾಲಿನಲ್ಲಿ ಕೋವಿಡ್ ಸಾಂಕ್ರಾಮಿಕದಿಂದ ಉಂಟಾಗಿರುವ ಹಾನಿಯು ಇದರಲ್ಲಿ ಸೇರಿದ್ದು, ಒಟ್ಟಾರೆ ಕೊರತೆಯನ್ನು ಕೇಂದ್ರ ಸರ್ಕಾರವು ಸಾಲದ ಮುಖಾಂತರ ರಾಜ್ಯಗಳಿಗೆ ತುಂಬಿಕೊಡಲು ಒಪ್ಪಿರುತ್ತದೆ. ಈ ಸಾಲದ ಅಸಲು ಮತ್ತು ಬಡ್ಡಿಯ ಮೊತ್ತವನ್ನು ಮುಂದಿನ ವರ್ಷಗಳಲ್ಲಿ ಸಂಗ್ರಹವಾಗುವ ಸೆಸ್ ಮೊತ್ತದಿಂದ ಮರುಪಾವತಿ ಮಾಡಲಾಗುತ್ತದೆ.<br><br>ರಾಜ್ಯವು ಎರಡು ಆಯ್ಕೆಗಳಲ್ಲಿ ಆಯ್ಕೆ-1ನ್ನು ಆಯ್ದುಕೊಂಡಿರುತ್ತದೆ. ತೆರಿಗೆ ನಷ್ಟ ಪರಿಹಾರ ಸಾಲವನ್ನು ರಾಜ್ಯಗಳು ಪಡೆಯುವುದರಿಂದ ಅಸಲು ಮತ್ತು ಬಡ್ಡಿಯ ಮರುಪಾವತಿಯ ಹೊರೆಯು ರಾಜ್ಯಗಳ ಮೇಲಿರದೆ ಸಂಗ್ರಹವಾಗುವ ಸೆಸ್ ಮೊತ್ತದಿಂದ ಪಾವತಿಸಲಾಗುವುದು.</td></tr>
<tr><td>ಇ)</td><td>ಒಂದು ವೇಳೆ ಕೇಂದ್ರ ಸರ್ಕಾರ ಜಿಎಸ್‌ಟಿ ತೆರಿಗೆ ಸಂಗ್ರಹ ಕೊರತೆಯನ್ನು ಜಿಎಸ್‌ಟಿ ಸೆಸ್ ಕಾಯ್ದೆ ಅಡಿಯಲ್ಲಿ ಸರಿದೂಗಿಸಲು ಅಸಾಧ್ಯವಾದಲ್ಲಿ ಕೇಂದ್ರ ಸರ್ಕಾರ ಪರ್ಯಾಯವಾಗಿ ರೂಪಿಸಿರುವ ಯೋಜನೆಯೇನು ಮತ್ತು ಈ ಪರ್ಯಾಯ ಯೋಜನೆ ಹೊರತುಪಡಿಸಿ, ಈ ಕೊರತೆಯನ್ನು ತುಂಬಿಸಲು ರಾಜ್ಯ ಸರ್ಕಾರ ರೂಪಿಸಿರುವ ಯೋಜನೆಗಳಾವುವು;</td><td>ಕೇಂದ್ರ ಸರ್ಕಾರವು ರಾಜ್ಯಗಳಿಗೆ ಜಿಎಸ್‌ಟಿ ನಷ್ಟ ಪರಿಹಾರವನ್ನು ಜಿಎಸ್‌ಟಿ ಸೆಸ್ ಸಂಗ್ರಹಣೆ ಮಾಡುವ ಮೂಲಕ ಭರಿಸುತ್ತಿದೆ. ಕೋವಿಡ್ ಕಾರಣದಿಂದಾಗಿ ಜಿಎಸ್‌ಟಿ ಸೆಸ್ ಸಂಗ್ರಹಣೆ ಇಳಿಕೆಯಾಗಿದ್ದು, ಇದರಿಂದಾಗಿ ರಾಜ್ಯಗಳಿಗೆ ಉಂಟಾಗಿರುವ ಜಿಎಸ್‌ಟಿ ನಷ್ಟವನ್ನು ಯಾವುದೇ ಬಾಕಿ ಉಳಿಸದೇ ಮುಂದಿನ ವರ್ಷಗಳಲ್ಲಿ ಸೆಸ್ ಸಂಗ್ರಹಣೆ ಮೂಲಕ ರಾಜ್ಯಗಳಿಗೆ ಭರಿಸಲಾಗುವುದೆಂದು ಕೇಂದ್ರ ಸರ್ಕಾರವು ತಿಳಿಸಿರುತ್ತದೆ.</td></tr>
</table>

| | | |
|---|---|---|
| ಈ) | ಹಿಂದಿನ ಆಯ-ವ್ಯಯದಲ್ಲಿ ಅಳವಡಿಕೆಯಾಗಿ ಮುಂದುವರೆದ ಮತ್ತು ಮುಂದಿನ ಆಯ-ವ್ಯಯಗಳಲ್ಲಿ ಕಲ್ಪಿಸಬೇಕಾಗಿರುವ ಮೂಲಭೂತ ಸೌಕರ್ಯಗಳಿಗೆ ಅನುದಾನವನ್ನು ಯಾವ ರೀತಿ ಸಂಪನ್ಮೂಲಗಳಿಂದ ಕ್ರೋಢೀಕರಿಸಲಾಗುವುದು? (ವಿವರ ಒದಗಿಸುವುದು) | ರಾಜ್ಯ ಸರ್ಕಾರವು ಮೂಲಭೂತ, ಸೌಕರ್ಯಗಳನ್ನು ಒಳಗೊಂಡಂತೆ ಇತರೆ ಬಂಡವಾಳ ವೆಚ್ಚಗಳಿಗೆ ಸಾಲಗಳ ಮೇಲೆ ಅವಲಂಬಿತವಾಗಿದ್ದು, ಸರ್ಕಾರವು ಆರ್ಥಿಕ ವರ್ಷದಲ್ಲಿ ಮಾಡುವ ಸಾಲವನ್ನು "ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002" ಸೂಚಿಸುವ ಮಿತಿಯೊಳಗೆ ಕಾಯ್ದುಕೊಳ್ಳಬೇಕಾಗಿರುವ ಕಾರಣ ಅದರಂತೆ ಸಾಲಗಳನ್ನು ಪಡೆದು ಮೂಲಭೂತ ಸೌಕರ್ಯ ಮತ್ತು ಇತರೆ ಬಂಡವಾಳ ವೆಚ್ಚಗಳಿಗೆ ಆಯವ್ಯಯದಲ್ಲಿ ಅನುದಾನವನ್ನು ಕಲ್ಪಿಸಲಾಗುವುದು. ಮುಂದಿನ ವರ್ಷಗಳಲ್ಲಿಯೂ ಸಹ ಸರ್ಕಾರವು ಮೇಲ್ಕಂಡ ಅಧಿನಿಯಮದ ಅನುಸಾರದಂತೆ ಸಾಲಗಳನ್ನು ಪಡೆದು ಹಾಗೂ ಸ್ವಂತ ಆದಾಯದಿಂದ (own tax receipts) ಮೂಲಭೂತ ಸೌಕರ್ಯ ಮತ್ತು ಇತರೆ ಬಂಡವಾಳ ವೆಚ್ಚಗಳಿಗೆ ವಿನಿಯೋಗಿಸಲಾಗುವುದು. |

ಸಂಖ್ಯೆ: ಆಇ 17 ಸಿಎಸ್‌ಎಲ್ 2021

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ